19 - 2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನ.ರಾ.ಚೌಕ, ಬೆಂಗಳೂರು-560002

## ದಿನಾಂಕ:27-08-2018ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

ವಿಷಯ ಸಂಖ್ಯೆ: ಸಾನ್ಯಾಸ್ಥಾಸ/ಪಿಆರ್/06/2018-19

## ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಮಂಡಿಸಲಾಗಿರುವ ಟಿಪ್ಪಣಿ

### 1. 2018-19ನೇ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ಕಲ್ಯಾಣ ವಿಭಾಗದ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ನಿಗದಿಪಡಿಸಿರುವ ಅನುದಾನಗಳ ವಿವರಗಳು:

ಮಾನ್ಯ ಆಯುಕ್ತರ ರವರ ಟಿಪ್ಪಣಿ ದಿನಾಂಕ:21-08-2018 ರಂತೆ ಉಲ್ಲೇಖಿತ ಆದೇಶಗಳನ್ವಯ 2018-19ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವು ಉಲ್ಲೇಖ (4)ರಂತೆ ಅನುಮೋದನೆಗೊಂಡಿರುತ್ತದೆ. ಸದರಿ ಆಯವ್ಯಯದಲ್ಲಿ (ಅ) ಶೇ.24.10ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/32/ಜಿಎಸ್‌ವಿ/2015 ದಿನಾಂಕ:30-07-2015 ರಲ್ಲಿ ಸೂಚಿಸಿರುವಂತೆ ಪರಿಶಿಷ್ಟ ಜಾತಿ ವರ್ಗದವರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡ ವರ್ಗದವರಿಗೆ ಶೇ.6.95 ನಿಗದಿಪಡಿಸಲಾಗಿದೆ. (ಆ)ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರ (ಇ)ಆರ್ಥಿಕವಾಗಿ ಹಿಂದುಳಿದ ಕಲ್ಯಾಣ ಕಾರ್ಯಕ್ರಮ/ ಕಾಮಗಾರಿಗಳಿಗೆ ಶೇ.7.25 ನಿಗದಿಪಡಿಸಲಾಗಿದೆ. ವರ್ಗದವರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು (ಈ)ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಸಾಮಾನ್ಯ ವರ್ಗ, ಹಿರಿಯ ನಾಗರಿಕ ಕಲ್ಯಾಣ ಕಾರ್ಯಕ್ರಮಗಳು, ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು, ಮಹಿಳಾ ವರ್ಗದವರ ಹಾಗೂ ಟ್ರಾನ್ಸ್‌ಜೆಂಡರ್‌ಗಳ ಕಲ್ಯಾಣ ಕಾರ್ಯಕ್ರಮಗಳಿಗೆ 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಚಾಲ್ತಿ ಅನುದಾನದ ವಿವರಗಳನ್ನು ಅನುಬಂಧ-01ರಲ್ಲಿ ಲಗತ್ತಿಸಿದೆ.

### 2.ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಗಳು:

### 2017-18ನೇ ಸಾಲಿನಲ್ಲಿ ಖರ್ಚಾಗದೇ ಉಳಿದಿರುವ ಆರ್ಥ ಚಾಲ್ತಿ ಅನುದಾನವನ್ನು 2018-19ನೇ ಸಾಲಿಗೆ ನಿಯಮಾವಳಿಯಂತೆ ಮುಂದುವರೆಸುವ ಬಗ್ಗೆ:

2017-18ನೇ ಸಾಲಿನ ಅನುದಾನದ ಹಂಚಿಕೆ ಮತ್ತು ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳ ಕ್ರಿಯಾಯೋಜನೆಗೆ ದಿನಾಂಕ:10-11-2017ರಂದು ಮಾನ್ಯ ಆಯುಕ್ತರವರ ಅನುಮೋದನೆಯಾಗಿದ್ದು, ಈ ಆಧಾರದ ಮೇಲೆ 2017-18ನೇ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗದಿಪಡಿಸಿರುವ ಅನುದಾನಕ್ಕೆ ಅನುಗುಣವಾಗಿ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸಿದ್ಧತೆ ಮಾಡಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದ್ದು 2017-18ನೇ ಸಾಲಿನ ಆರ್ಥಿಕ ವರ್ಷ ಈಗಾಗಲೇ ಮುಕ್ತಾಯಗೊಂಡಿದ್ದು ಕಾರ್ಯಕ್ರಮಗಳು ಅನುಷ್ಠಾನದ ಕೊನೆಯ ಹಂತದಲ್ಲಿರುತ್ತದೆ.

ಮೇಲ್ಕಂಡಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮತ್ತು ಮಾನ್ಯ ಆಯುಕ್ತರ ಆದೇಶದಂತೆ 2017-18ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕೇಂದ್ರ/ವಲಯ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದ್ದು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಸರಬರಾಜು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿದೆ. ಅಲ್ಲದೇ ನಿಯಮಾನುಸಾರ ಮಾರ್ಗಸೂಚಿಯನ್ವಯ ಟೆಂಡರ್ ರಹಿತ ಕಾರ್ಯಕ್ರಮಗಳಾದ ಶಾಲಾ/ಕಾಲೇಜು ಶುಲ್ಕಗಳ ಮರುಪಾವತಿ ನೀಡುವ ಕಾರ್ಯಕ್ರಮಗಳಿಗೂ ಸಹಾ ವಲಯ ಮಟ್ಟದಲ್ಲಿ ಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಸೌಲಭ್ಯಗಳನ್ನು ವಿತರಿಸುವ ಹಂತದಲ್ಲಿರುತ್ತದೆ. ಆದುದರಿಂದ ಈ ಲ್ಲಾ ಕಾರ್ಯಕ್ರಮಗಳನ್ನು 2017-18ನೇ ಸಾಲಿನ ಕ್ರಿಯಾಯೋಜನೆಯಲ್ಲಿನ ಅವಕಾಶಗಳು, ಕಾರ್ಯಕ್ರಮ ನುದಾನದ ಲಭ್ಯತೆಯ ಮೇರೆಗೆ 2018-19ನೇ ಸಾಲಿಗೆ ಮುಂದುವರೆಸಿಕೊಂಡು, ಸದರಿ ಕಾರ್ಯಕ್ರಮಗಳಿಗೆ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಎಲ್ಲಾ ಎಂಟು ವಲಯಗಳ, 198 ವಾರ್ಡ್‌ಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡಲು ನಿರ್ಣಯಿಸಿದೆ.

8. ಪಿ-1878ರ ಮುಖ್ಯಶೀರ್ಷಿಕೆ ಸೌಲಭ್ಯಗಳ ಕಾರ್ಯಕ್ರಮದ ಅಡಿಯಲ್ಲಿ ನಿಗದಿ ಪಡಿಸಿರುವ ರೂ.11000-00 ಲಕ್ಷಗಳ ಅನುದಾನವನ್ನು ಶೇ.50 ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕೈಗೊಳ್ಳಲು ಈ ಕೆಳಕಂಡ ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗಿದ್ದು, ಪಾಲಿಕೆ ಸದಸ್ಯರು ಸೂಚಿಸುವ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಲು ಸಮಿತಿಯು ತೀರ್ಮಾನಿಸಿದೆ. ಹಂಚಿಕೆ ಮಾಡಿರುವಂತೆ ಮುಖ್ಯ ಆರ್ಥಿಕ ಅಧಿಕಾರಿಗಳು ವಲಯವಾರು ಅನುದಾನ ಹಂಚಿಕೆ ಮಾಡಲು ಕ್ರಮಕೈಗೊಳ್ಳುವುದು. ಅದರಂತೆ ಆಯಾ ವಲಯದ ಉಪ ನಿಯಂತ್ರಕರು (ಹಣಕಾಸು)ರವರು ಜಾಬ್‌ಸಂಖ್ಯೆ ನೀಡುವುದು. ಹಾಗೂ ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಅಂಗ ಸಂಸ್ಥೆಯಾದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ನಿರ್ಣಯಿಸಿದೆ.

| ಕ್ರ. ಸಂ. | ವಾರ್ಡ್ ಸಂಖ್ಯೆ | ಮೊತ್ತ (ರೂ ಲಕ್ಷಗಳಲ್ಲಿ) | ಕ್ರ. ಸಂ | ವಾರ್ಡ್ ಸಂಖ್ಯೆ | ಮೊತ್ತ (ರೂ ಲಕ್ಷಗಳಲ್ಲಿ) |
|---|---|---|---|---|---|
| 1 | 2 | 50.00 | 35 | 104 | 75.00 |
| 2 | 3 | 150.00 | 36 | 112 | 75.00 |
| 3 | 5 | 275.00 | 37 | 117 | 60.00 |
| 4 | 6 | 150.00 | 38 | 121 | 50.00 |
| 5 | 7 | 100.00 | 39 | 124 | 100.00 |
| 6 | 8 | 200.00 | 40 | 130 | 25.00 |
| 7 | 11 | 400.00 | 41 | 131 | 100.00 |
| 8 | 12 | 50.00 | 42 | 132 | 150.00 |
| 9 | 14 | 100.00 | 43 | 133 | 100.00 |
| 10 | 21 | 100.00 | 44 | 134 | 100.00 |
| 11 | 25 | 400.00 | 45 | 135 | 150.00 |
| 12 | 28 | 200.00 | 46 | 136 | 225.00 |
| 13 | 31 | 200.00 | 47 | 138 | 50.00 |
| 14 | 35 | 60.00 | 48 | 139 | 125.00 |
| 15 | 40 | 500.00 | 49 | 140 | 75.00 |
| 16 | 43 | 100.00 | 50 | 141 | 100.00 |
| 17 | 48 | 50.00 | 51 | 145 | 100.00 |
| 18 | 54 | 400.00 | 52 | 149 | 300.00 |
| 19 | 59 | 130.00 | 53 | 150 | 100.00 |
| 20 | 60 | 100.00 | 54 | 151 | 100.00 |
| 21 | 62 | 250.00 | 55 | 152 | 75.00 |
| 22 | 67 | 140.00 | 56 | 166 | 200.00 |
| 23 | 71 | 400.00 | 57 | 172 | 75.00 |
| 24 | 72 | 450.00 | 58 | 173 | 50.00 |
| 25 | 77 | 200.00 | 59 | 175 | 150.00 |
| 26 | 78 | 150.00 | 60 | 179 | 50.00 |
| 27 | 82 | 100.00 | 61 | 180 | 100.00 |
| 28 | 84 | 200.00 | 62 | 184 | 800.00 |
| 29 | 88 | 30.00 | 63 | 188 | 200.00 |
| 30 | 90 | 250.00 | 64 | 194 | 125.00 |
| 31 | 95 | 80.00 | 65 | 196 | 400.00 |

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

Division

|  |  |  |  |  |  |
|---|---|---|---|---|---|
|  |  | 50.00 | 66 | 198 | 350.00 |
| 32 | 98 | 125.00 | 67 | 160 | 25.00 |
| 33 | 99 | 100.00 |  |  |  |
| 34 | 101 |  |  |  |  |

9. ಪಿ-2632ರ ಸಮುದಾಯ ಕಾಮಗಾರಿ ಸೌಲಭ್ಯಗಳು ಕಾರ್ಯಕ್ರಮದ ಅಡಿಯಲ್ಲಿ ನಿಗದಿ ಪಡಿಸಿರುವ ರೂ.500.00 ಲಕ್ಷಗಳ ಅನುದಾನವನ್ನು ಶೇ.50 ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಅಗತ್ಯ ಸಮುದಾಯ ಕಾಮಗಾರಿ ಸೌಲಭ್ಯಗಳನ್ನು ಕೈಗೊಳ್ಳಲು ಈ ಕೆಳಕಂಡ ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗಿದ್ದು, ಪಾಲಿಕೆ ಸದಸ್ಯರು ಸೂಚಿಸುವ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಲು ಸಮಿತಿಯು ತೀರ್ಮಾನಿಸಿದೆ. ಹಂಚಿಕೆ ಮಾಡಿರುವಂತೆ ಮುಖ್ಯ ಆರ್ಥಿಕ ಅಧಿಕಾರಿಗಳು ವಲಯವಾರು ಅನುದಾನ ಹಂಚಿಕೆ ಮಾಡಲು ಕ್ರಮಕೈಗೊಳ್ಳುವುದು. ಅದರಂತೆ ಆಯಾ ವಲಯದ ಉಪ ನಿಯಂತ್ರಕರು (ಹಣಕಾಸು) ರವರು ಜಾಬ್‌ಸಂಖ್ಯೆ ನೀಡುವುದು ಹಾಗೂ ಸದರಿ ಕಾಮಗಾರಿಗಳನ್ನು ಸರ್ಕಾರದ ಅಂಗ ಸಂಸ್ಥೆಯಾದ ಕೆ.ಆರ್.ಐ.ಡಿ.ಎಲ್ ಮುಖಾಂತರ ಕೈಗೊಳ್ಳಬೇಕಾಗಿರುವ ಹಿನ್ನಲೆಯಲ್ಲಿ ಸಂಸ್ಥೆಯ ಮುಖಾಂತರ ಕೈಗೊಳ್ಳಲು ನಿರ್ಣಯಿಸಿದೆ.

| ಕ್ರ. ಸಂ. | ವಾರ್ಡ್ ಸಂಖ್ಯೆ | ಮೊತ್ತ (ರೂ ಲಕ್ಷಗಳಲ್ಲಿ) | ಕ್ರ. ಸಂ. | ವಾರ್ಡ್ ಸಂಖ್ಯೆ | ಮೊತ್ತ (ರೂ ಲಕ್ಷಗಳಲ್ಲಿ) |
|---|---|---|---|---|---|
| 1 | 175 | 100.00 | 4 | 12 | 50.00 |
| 2 | 194 | 100.00 | 5 | 153 | 150.00 |
| 3 | 59 | 100.00 |  |  |  |

10. ಪಿ-2021 ವಸತಿ ಸೌಲಭ್ಯಗಳಿಗೆ ಸಹಾಯಧನ ಕಾರ್ಯಕ್ರಮಗಳು ಅಡಿಯಲ್ಲಿ ರೂ.10,000.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರಿಗೆ ಪಕ್ಕಾ ಮನೆ ನಿರ್ಮಾಣಕ್ಕೆ ಪ್ರತಿ ಮನೆಗೆ ರೂ.5.00 ಲಕ್ಷಗಳ ಸಹಾಯಧನವನ್ನು ಮೀಸಲಿರಿಸಿದ್ದು, ಇದರಲ್ಲಿ ರೂ.4.50 ಲಕ್ಷಗಳನ್ನು ಪ್ರತಿ ಪಕ್ಕಾ ಮನೆ ನಿರ್ಮಾಣಕ್ಕೆ ನಿಗಧಿಪಡಿಸಿದೆ. ಉಳಿದ ರೂ 50.00 ಸಾವಿರಗಳನ್ನು ಸದರಿ ಮನೆಗೆ ಸೋಲಾರ್ ವಾಟರ್ ಹೀಟರ್‌ನ್ನು ಅಳವಡಿಸಲು ನಿಗಧಿಪಡಿಸಿದೆ.

ವಸತಿ ಕಾಮಗಾರಿಗಳನ್ನು ಕಾಮಗಾರಿ ಶಾಖೆಯಿಂದ ವಲಯ ಮುಖ್ಯ ಅಭಿಯಂತರರು, ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ವಾರ್ಡವಾರು ಕಾಮಗಾರಿ ಕ್ರಿಯಾ ಪ್ರಸ್ತಾವನೆಗಳನ್ನು ಒಳಗೊಂಡ ವಾರ್ಡ್/ಉಪ ವಿಭಾಗ/ವಿಭಾಗೀಯ/ವಲಯವಾರು ಯೋಜನೆಯನ್ನು ಸಿದ್ಧಪಡಿಸಿ ಸಮುಚ್ಛಯ ಮಾರ್ಗದಲ್ಲಿ ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿದೆ.

ಸದರಿ ಯೋಜನೆಯಲ್ಲಿ ಪೂರ್ಣಗೊಂಡ ಮನೆಗಳಿಗೆ ನಿಗಧಿತ ಸಮಯದಲ್ಲಿ 4ಜಿ ವಿನಾಯಿತಿ ಹೊಂದಿರುವ ಸಂಸ್ಥೆ/ಟೆಂಡರ್ ನಿಯಮಾವಳಿಗಳ ಅನುಸಾರ ಸೋಲಾರ್ ವಾಟರ್ ಹೀಟರ್‌ನ್ನು ಅಳವಡಿಸುವ ಸಲುವಾಗಿ ಕೇಂದ್ರ ಕಛೇರಿಯ ಕಲ್ಯಾಣ ವಿಭಾಗದಿಂದ ಕ್ರಮ ಕೈಗೊಳ್ಳಲು ತೀರ್ಮಾನಿಸಿದೆ.

11. ಪಿ-3407 ಪೌರಕಾರ್ಮಿಕರಿಗೆ ಮಧ್ಯಾಹ್ನದ ಬಿಸಿ ಊಟ ನೀಡುವ ಕಾರ್ಯಕ್ರಮದ ಅಡಿಯಲ್ಲಿ ರೂ.1500.00 ಲಕ್ಷಗಳನ್ನು ನಿಗಧಪಡಿಸಿದ್ದು, ಸದರಿ ಕಾರ್ಯಕ್ರಮವನ್ನು ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ) ರವರ ವಿಭಾಗದಿಂದ ನಿರ್ವಹಿಸಲು ತೀರ್ಮಾನಿಸಿದೆ.

12. ಪಿ-3408 ರ ಪೌರಕಾರ್ಮಿಕರಿಗೆ ಸುರಕ್ಷಾ ಸಲಕರಣೆಗಳು ಅಡಿಯುಲ್ಲಿ ರೂ.1500.00 ಲಕ್ಷಗಳನ್ನು ನಿಗದಿಪಡಿಸಿದ್ದು, ಸದರಿ ಕಾರ್ಯಕ್ರಮವನ್ನು ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘನ ತ್ಯಾಜ್ಯ) ರವರ ಸಹಯೋಗದೊಂದಿಗೆ ವಿಶೇಷ ಆಯುಕ್ತರು (ಕಲ್ಯಾಣ) ರವರ ಮುಖಾಂತರ ನಿರ್ವಹಿಸಲು ತೀರ್ಮಾನಿಸಿದೆ ಹಾಗೂ ಸದರಿ ಅನುದಾನವನ್ನು ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ) ರವರು ಸಲ್ಲಿಸುವ ಪೌರಕಾರ್ಮಿಕರ ವಿವಿಧ ಸುರಕ್ಷಾ ಸಲಕರಣೆಗಳ ಬೇಡಿಕೆಗೆ ಅನುಗುಣವಾಗಿ ವಲಯವಾರು ಹಂಚಿಕೆ ಮಾಡಲು ನಿರ್ಣಯಿಸಿದೆ.

ಅಧ್ಯಕ್ಷರು

4227

3

2018-19 ನೇ ಸಾಲಿನಲ್ಲಿ ಈ ಮೇಲ್ಕಂಡ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ [illegible] ಧನ ಸಹಾಯ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಅನುದಾನ ಹಂಚಿಕೆಯನ್ನು ನೀಡಲು ಮತ್ತು ವಿವಿಧ [illegible] ಮುಂದುವರೆದ ಕಲ್ಯಾಣ ಕಾರ್ಯಕ್ರಮಗಳಿಗೆ ಬಿ.ಬಿ.ಎಂ.ಪಿ [illegible] ಸಮಿತಿಯ [illegible] ಎಲ್ಲಾ ಕಲ್ಯಾಣ ಕಾರ್ಯಕ್ರಮ ಮತ್ತು ಅನುದಾನಗಳನ್ನು ಸದರಿ ಸಮಿತಿಯಲ್ಲಿಯೇ [illegible] ಸಮಿತಿಯು ವಲಯಗಳ ಕಲ್ಯಾಣ ಹಾಗೂ ಅನುದಾನ ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳಿಗೆ ಸೂಚಿಸಿ ಸರ್ವಾನುಮತದಿಂದ ತೀರ್ಮಾನಿಸಿದೆ.

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

| ಕ್ರ. ಸಂ. | ಹೆಸರು | ಪದನಾಮ | |
|---|---|---|---|
| 1. | ಶ್ರೀ.ಅಬ್ದುಲ್ ರಖೀಬ್ ಝುಬೇರ್ | ಅಧ್ಯಕ್ಷರು | |
| 2. | ಶ್ರೀಮತಿ.ಮಂಜುಳ ಎನ್.ಸ್ವಾಮಿ | ಸದಸ್ಯರು | |
| 3. | ಶ್ರೀಮತಿ.ಭಾಗ್ಯಮ್ಮ ಕೃಷ್ಣಯ್ಯ | ಸದಸ್ಯರು | |
| 4. | ಶ್ರೀಮತಿ.ಸರಳ ಸಿ. ಮಹೇಶ್‌ಬಾಬು | ಸದಸ್ಯರು | |
| 5. | ಶ್ರೀ.ಹನುಮಂತಯ್ಯ | ಸದಸ್ಯರು | |
| 6. | ಶ್ರೀಮತಿ.ರಾಜೇಶ್ವರಿ ಚೋಳರಾಜ.ಕೆ | ಸದಸ್ಯರು | ರಾಜೇಶ್ವರಿ |
| 7. | ಶ್ರೀಮತಿ.ಡಿ.ಮುನಿಲಕ್ಷ್ಮಮ್ಮ | ಸದಸ್ಯರು | |
| 8. | ಶ್ರೀಮತಿ.ರಾಧಮ್ಮ ವೆಂಕಟೇಶ್ | ಸದಸ್ಯರು | ರಾಧಮ್ಮ |
| 9. | ಶ್ರೀ.ಎ.ಸಿ.ಹರಿಪ್ರಸಾದ್ | ಸದಸ್ಯರು | |
| 10. | ಶ್ರೀ.ವಿ.ವಿ.ಪಾರ್ತಿಬರಾಜನ್ | ಸದಸ್ಯರು | |
| 11. | ಶ್ರೀ.ರಾಜಣ್ಣ | ಸದಸ್ಯರು | |